## ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ

# ಸಮಾಜ ವಿಜ್ಞಾನ

## ಮಾದರಿ ಪ್ರಶ್ನೆ ಪತ್ರಿಕೆ –1

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳು ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8 x1= 8**

1. 'ಜಾತ್ಯಾತೀತ ಮತ್ತು ಸಮಾಜವಾದಿ' ಎಂಬ ಪದಗಳು ಸಂವಿಧಾನಕ್ಕೆ ಈ ತಿದ್ದುಪಡಿ ಮೂಲಕ ಸೇರ್ಪಡೆಗೊಂಡವು
   ಎ) 73ನೇ ತಿದ್ದುಪಡಿ ಬಿ) 17ನೇ ತಿದ್ದುಪಡಿ ಸಿ) 42ನೇ ತಿದ್ದುಪಡಿ ಡಿ) 21ನೇ ತಿದ್ದುಪಡಿ
2. ಶ್ರೀ ನಾರಾಯಣಗುರುರವರು 'ವೈಕಂ ಸತ್ಯಾಗ್ರಹ' ವನ್ನು ಪ್ರಾರಂಭಿಸಿದ ಉದ್ದೇಶ
   ಎ) ದೇವಾಲಯಗಳಿಗೆ ಪ್ರವೇಶ ಕಲ್ಪಿಸಲು ಬಿ) ಪಾಶ್ಚಿಮಾತ್ಯ ಶಿಕ್ಷಣ ನೀಡಲು
   ಸಿ) ಸ್ತ್ರೀ ಶೋಷಣೆ ತಡೆಯಲು ಡಿ) ಸತಿ ಸಹಗಮನ ನಿರ್ಮೂಲನೆ
3. ಸಾರ್ವಜನಿಕ ಆಡಳಿತದ ಪಿತಾಮಹ ಎಂದು ಕರೆಯುವುದು
   ಎ) ವುಡ್ರೋ ವಿಲ್ಸನ್ ಬಿ) ಫಿಪನರ್ ಸಿ) ಲೂಥರ್‌ಗುಲಿಕ್ ಡಿ) ಏಫ್.ಎಂ. ಮಾರ್ಕ್ಸ್
4. ಕೆಳಗಿನ ದುಡಿಮೆಗಳಲ್ಲಿ ಅಸಂಘಟಿತ ವಲಯಕ್ಕೆ ಸೇರಿದ್ದು
   ಎ)ಶಿಕ್ಷಕರು ಬಿ) ಸೈನಿಕರು ಸಿ) ರೈತರು ಡಿ) ವೈದ್ಯರು
5. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶ
   ಎ)ಡ್ರಾಸ್ ಬಿ) ಗಂಗಾನಗರ ಸಿ) ಮೌಸಿನ್‌ರಾಮ್ ಡಿ) ರೂಯ್ಲಿ
6. 'ಭಾರತದ ಚಹಾ ಬಂದರು' ಎಂದು ಕರೆಯಲ್ಪಡುವುದು
   ಎ)ಮುಂಬೈ ಬಿ) ಚೆನ್ನೈ ಸಿ) ಕೋಲ್ಕತ್ತ ಡಿ) ನವಮಂಗಳೂರು
7. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿ
   ಎ)ಹಸಿರು ಕ್ರಾಂತಿ ಬಿ) ನೀಲಿ ಕ್ರಾಂತಿ ಸಿ) ಬಿಳಿ ಕ್ರಾಂತಿ ಡಿ) ಹಳದಿ ಕ್ರಾಂತಿ
8. ಠೇವಣಿಯನ್ನು ನಿಗದಿತ ಅವಧಿಗೆ ಇಡಬಹುದಾದ ಖಾತೆ ವಿಧ
   ಎ)ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8x1= 8**

9. 18ನೇ ಶತಮಾನವನ್ನು 'ರಾಜಕೀಯ ಸಮಸ್ಯೆಗಳ ಶತಮಾನ' ಎಂದು ಕರೆಯಲಾಗಿದೆ. ಎಕೆ?
10. ಭಾಷಾವಾರು ಆಧಾರದಲ್ಲಿ ರಚನೆಯಾದ ಮೊದಲ ರಾಜ್ಯಯಾವುದು?
11. ಸಾರ್ಕ್ ಸಂಘಟನೆಯ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು?
12. ಶ್ರಮ ವಿಭಜನೆ ಎಂದರೇನು?
13. ಹೆಣ್ಣು ಭ್ರೂಣ ಹತ್ಯೆಯನ್ನು ಅರ್ಥೈಸಿ.
14. ರಾಷ್ಟ್ರೀಯ ವಿದ್ಯುತ್‌ಜಾಲ ಸ್ಥಾಪನೆಯ ಉದ್ದೇಶವೇನು?
15. ವಿತ್ತೀಯ ಕೊರತೆಯನ್ನು ಸೂತ್ರದ ರೂಪದಲ್ಲಿ ಬರೆಯಿರಿ.
16. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿರುವ ಉದ್ದೇಶವನ್ನು ತಿಳಿಸಿ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. : 8x2= 16**

17. ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳೇನು?
18. 'ನಾಜೀ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು'. ಸ್ಪಷ್ಟೀಕರಿಸಿ.
19. ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸಿ.

**ಅಥವಾ**

ವಿಶ್ವ ಸಂಸ್ಥೆಯ ಯಾವುದಾದರೂ ನಾಲ್ಕು ಸಾಧನೆಗಳನ್ನು ತಿಳಿಸಿ.

20. ಮಹಿಳಾ ಸ್ವಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ

ಅಥವಾ

ಬಾಲಕಾರ್ಮಿಕ ಸಮಸ್ಯೆಯಿಂದಾಗುವ ಪರಿಣಾಮಗಳನ್ನು ವಿವರಿಸಿ.

21. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ. ಸ್ಪಷ್ಟಪಡಿಸಿ.
22. ಭತ್ತದ ಬೆಳೆಗೆ ಬೇಕಾದ ನಾಲ್ಕು ಭೌಗೋಳಿಕ ಅಂಶಗಳನ್ನು ಪಟ್ಟಿ ಮಾಡಿ.
23. ಸುಗ್ಗಿ ಪೂರ್ವತಂತ್ರಜ್ಞಾನ ಒಳಗೊಂಡಿರುವ ಅಂಶಗಳಾವುವು?
24. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಉದ್ದೇಶಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. : 9 x3= 27**

25. "ಮಾರ್ತಾಂಡ ವರ್ಮನು ಭಾರತದಲ್ಲಿ ಡಚ್ಚರ ಅಧಿಕಾರದ ಅವನತಿಗೆ ಕಾರಣನಾದನು" ಸಮರ್ಥಿಸಿ.
26. ಮಾಂಟೆಗೋ–ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆಯ ಪ್ರಮುಖ ಅಂಶಗಳನ್ನು ವಿವರಿಸಿ.

**ಅಥವಾ**

ಅನಿಬೆಸೆಂಟರ ಕೊಡುಗೆಗಳನ್ನು ವಿವರಿಸಿ.

27. ವಿದೇಶಾಂಗ ನೀತಿಯ ಮೂಲ ತತ್ವಗಳು ಯಾವುವು?
28. ಅಸ್ಪೃಶ್ಯತಾ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ಕ್ರಮಗಳಾವುವು?
29. ಮಂದಗಾಮಿಗಳು ಬ್ರಿಟೀಷ್ ಸರ್ಕಾರದ ಮುಂದಿಟ್ಟ ಬೇಡಿಕೆಗಳನ್ನು ವಿವರಿಸಿ.
30. ಮಾನವ ಮತ್ತು ಪರಿಸರಕ್ಕೆ ಅರಣ್ಯಗಳು ಬಹಳಷ್ಟು ಉಪಯುಕ್ತವಾಗಿವೆ. ಸ್ಪಷ್ಟೀಕರಿಸಿ.
31. ಕೈಗಾರಿಕೆಯ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.

**ಅಥವಾ**

ಭೂಕಂಪದ ಪರಿಣಾಮಗಳನ್ನು ವಿವರಿಸಿ.

32. ಅಂಚೆ ಕಚೇರಿಯು ಬ್ಯಾಂಕ್‌ನಂತೆಯೇ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಹೇಗೆ ನಿರೂಪಿಸುವಿರಿ.

**ಅಥವಾ**

ದೇಶದ ಆರ್ಥಿಕತೆ ಅಭಿವೃದ್ಧಿಯಲ್ಲಿ ಉದ್ಯಮಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಸಮರ್ಥಿಸಿ

33. ಪಂಚಾಯತ್‌ರಾಜ್ ಸಂಸ್ಥೆಗಳು ಗ್ರಾಮಗಳ ಅಭಿವೃದ್ಧಿಗೆ ಹೇಗೆ ಸಹಕಾರಿಯಾಗಿದೆ? ಸ್ಪಷ್ಟೀಕರಿಸಿ.

**ಅಥವಾ**

ವೈಯಕ್ತಿಕ ಹಣಕಾಸು, ಸಾರ್ವಜನಿಕ ಹಣಕಾಸಿಗಿಂತ ಭಿನ್ನವಾಗಿದೆ. ಸಮರ್ಥಿಸಿ.

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. : 4x4= 16**

34. 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಸೈನಿಕರು ಜಯಗಳಿಸಲು ವಿಫಲರಾದರು'. ನಿರೂಪಿಸಿ.

**ಅಥವಾ**

"ಚಿಕ್ಕದೇವರಾಜ ಒಡೆಯರು ಸಮರ್ಥ ಆಡಳಿತಗಾರರಾಗಿದ್ದರು" ಈ ಹೇಳಿಕೆಯನ್ನು ಸಮರ್ಥಿಸಿ

35. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರವನ್ನು ವಿವರಿಸಿ.
36. ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕಾಗಿ ಕೈಗೊಂಡಿರುವ ಕ್ರಮಗಳನ್ನು ಬರೆಯಿರಿ
37. ಮಣ್ಣಿಯ ಸಂರಕ್ಷಣಾ ಕ್ರಮಗಳನ್ನು ವಿವರಿಸಿ.

**VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ. 1x4=5**

1. 23½ ಉತ್ತರ ಅಕ್ಷಾಂಶ
2. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ
3. ಕೋಸಿ ಯೋಜನೆ
4. ಬಾಂಬೆ ಹೈ
5. ಅರಾವಳಿ ಪರ್ವತ ಶ್ರೇಣಿ
6. ಇಂದಿರಾ ಕೋಲ್
7. ನರೋರ

# ಮಾದರಿ ಪ್ರಶ್ನೆ ಪತ್ರಿಕೆ –2

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳು ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8*1= 8**

1. ಇಟಲಿಯಲ್ಲಿನ ಫ್ಯಾಸಿಸ್ಟ್‌ರ ನಾಯಕ
   ಎ) ಹಿಟ್ಲರ್ ಬಿ) ಮುಸ್ಸೋಲಿನಿ ಸಿ) ಹಿಂಡೆನ್ ಬರ್ಗ್ ಡಿ) ಗೋಬೆಲ್ಸ್
2. ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದ ಬ್ರಿಟಿಷ್ ಗವರ್ನರ್ ಜನರಲ್
   ಎ) ಲಾರ್ಡ್ ಕಾರ್ನ್‌ವಾಲೀಸ್ ಬಿ) ಲಾರ್ಡ್ ಡಾಲ್ ಹೌಸಿ
   ಸಿ) ಲಾರ್ಡ್ ವೆಲ್ಲೆಸ್ಲಿ ಡಿ) ಲಾರ್ಡ್ ವಿಲಿಯಂ ಬೆಂಟಿಂಕ್
3. ವಿಶ್ವ ಸಂಸ್ಥೆಯ 'ಜಾಗತಿಕ ಸಂಸತ್ತು' ಎಂದು ಹೆಸರಾದ ಅಂಗಸಂಸ್ಥೆ
   ಎ) ಸಾಮಾನ್ಯ ಸಭೆ ಬಿ) ಭದ್ರತಾ ಸಮಿತಿ ಸಿ) ದತ್ತಿ ಸಮಿತಿ ಡಿ) ಸಚಿವಾಲಯ
4. ಬಾಲ ಕಾರ್ಮಿಕ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ
   ಎ) 1966 ಬಿ) 1976 ಸಿ) 1986 ಡಿ) 1996
5. ಇದು ಪರೋಕ್ಷ ತೆರಿಗೆಗೆ ಉದಾಹರಣೆಯಾಗಿದೆ.
   ಎ) ಆದಾಯ ತೆರಿಗೆ ಬಿ) ವರಮಾನ ತೆರಿಗೆ
   ಸಿ) ಸಂಪತ್ತಿನ ತೆರಿಗೆ ಡಿ) ಸರಕು ಮತ್ತು ಸೇವಾ ತೆರಿಗೆ
6. ಉದ್ಯಮಿ ಎಂಬ ಪದವು ಈ ಭಾಷೆಯ ಪದವಾಗಿದೆ.
   ಎ) ಫ್ರೆಂಚ್ ಬಿ) ಜರ್ಮನಿ ಸಿ) ಇಟಾಲಿಯನ್ ಡಿ) ಸ್ಪ್ಯಾನಿಶ್
7. 20ನೇ ಶತರಮಾನದ ಅದ್ಭುತ ಲೋಹ
   ಎ) ಮ್ಯಾಂಗನೀಸ್ ಬಿ) ಅಭ್ರಕ ಸಿ) ಬಾಕ್ಸೈಟ್ ಡಿ) ಕಬ್ಬಿಣ
8. ಕರ್ನಾಟಕದ ಅತಿ ದೊಡ್ಡ ನದಿ ಕಣಿವೆ ಯೋಜನೆ
   ಎ) ಹಿರಾಕುಡ್ ಬಿ) ನಾಗಾರ್ಜುನ ಸಾಗರ ಸಿ) ತುಂಗಾಭದ್ರಾ ಡಿ) ಕೃಷ್ಣ ಮೇಲ್ದಂಡೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 x1= 8**

9. ಬ್ರಿಟಿಷರು ಮಿಂಟೋ–ಮಾರ್ಲೆ ಕಾಯ್ದೆಯನ್ನು ಜಾರಿಗೊಳಿಸಿದ್ದು ಏಕೆ?
10. ಎರಡನೇ ಆಂಗ್ಲೋ–ಮೈಸೂರು ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದವನ್ನು ಹೆಸರಿಸಿ.
11. ಸಾರ್ವಜನಿಕ ಆಡಳಿತವು ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ ಏನಾಗುತ್ತದೆ?
12. ಶಿಕ್ಷಣ ಹಕ್ಕು ಕಾಯ್ದೆ–2009 ಯನ್ನು ಜಾರಿಗೊಳಿಸಿದ ಉದ್ದೇಶವೇನು?
13. ಚಿಪ್ಕೋ ಚಳುವಳಿ ಎಲ್ಲಿ ಪ್ರಾರಂಭವಾಯಿತು?
14. 'ಉತ್ತರದ ಹಿಮಾಲಯ ಪರ್ವತಗಳು ಮತ್ತು ದಕ್ಕನ್ ಪ್ರಸ್ಥಭೂಮಿ ಬೇಸಿಗೆಯಲ್ಲಿ ತಂಪಾಗಿರುತ್ತವೆ'. ಏಕೆ?
15. ರಾಷ್ಟ್ರೀಕೃತ ಬ್ಯಾಂಕಿಗೆ ಒಂದು ಉದಾಹರಣೆಯನ್ನು ಕೊಡಿ.
16. ಭಾರತದ ಯೋಜನೆಗಳ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2–4 ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. : 8 x2= 16**

17. ಭಾರತವು ಮಾನವ ಹಕ್ಕುಗಳ ರಕ್ಷಣೆಗೆ ತೆಗೆದುಕೊಂಡ ಕ್ರಮಗಳನ್ನು ಹೆಸರಿಸಿ.

    **ಅಥವಾ**

    ಯುನೆಸ್ಕೋ ಕಾರ್ಯಗಳಾವುವು?
18. ಪೂರ್ವಾಗ್ರಹವನ್ನು ಅರ್ಥೈಸಿ.

    **ಅಥವಾ**

    ನರ್ಮದಾ ಬಚಾವೋ ಚಳುವಳಿ ಪ್ರಾರಂಭಿಸಿದವರು ಯಾರು ಮತ್ತು ಏಕೆ?
19. ಬ್ರಿಟಿಷರ ವಿಸ್ತರಣಾವಾದಿ ನೀತಿಗೆ ದತ್ತು ರದ್ಧತಿ ಸೂತ್ರವು ಹೇಗೆ ಸಹಕಾರಿಯಾಯಿತು?
20. ಭಾರತವು ಸ್ವಾತಂತ್ರ್ಯಗೊಂಡಾಗ ಎದುರಿಸಿದ ಸಮಸ್ಯೆಗಳು ಯಾವುವು?
21. ಅರಣ್ಯ ನಾಶದ ಕಾರಣಗಳನ್ನು ಪಟ್ಟಿ ಮಾಡಿರಿ.

22. ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಎರಡು ಅಂಶಗಳನ್ನು ತಿಳಿಸಿ.
23. ಪ್ರತ್ಯಕ್ಷ ತೆರಿಗೆ ಎಂದರೇನು?
24. ಗ್ರಾಹಕ ನ್ಯಾಯಾಲಯದ ಹಂತಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. : 9 x3= 27**

25. ಸ್ವಾಮಿ ವಿವೇಕಾನಂದರು ಭಾರತೀಯ ಸಮಾಜಕ್ಕೆ ನೀಡಿದ ಕೊಡುಗೆಗಳು ಯಾವುವು?

**ಅಥವಾ**

ಎರಡನೇ ಮಹಾಯುದ್ದದ ಕಾರಣಗಳನ್ನು ತಿಳಿಸಿ

26. ಭಾರತದಲ್ಲಿ ಮಣ್ಣನ್ನು ಸಂರಕ್ಷಿಸಲು ನಾವು ಕೈಗೊಳ್ಳಬೇಕಾದ ಕ್ರಮಗಳನ್ನು ಹೆಸರಿಸಿ

**ಅಥವಾ**

ಅರಣ್ಯಗಳ ಸಂರಕ್ಷಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರಿಸಿ

27. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ಬರೆಯಿರಿ.

**ಅಥವಾ**

ಮಹಿಳೆಯರನ್ನು ಸಂಘಟಿಸುವಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ

28. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳೇನು?

**ಅಥವಾ**

ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳ ಪಾತ್ರವನ್ನು ವಿಶ್ಲೇಷಿಸಿ.

29. ಪ್ಲಾಸಿ ಕದನದ ಕಾರಣಗಳನ್ನು ತಿಳಿಸಿ.
30. ಲಾಭಕೋರತನವು ಹಲವಾರು ನಕಾರಾತ್ಮಕ ಪರಿಣಾಮಗಳನ್ನು ಉಂಟು ಮಾಡುತ್ತದೆ ಹೇಗೆ?
31. ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸವನ್ನು ತಿಳಿಸಿ.
32. ದೂರ ಸಂವೇದಿ ತಂತ್ರಜ್ಞಾನದ ಉಪಯೋಗಗಳನ್ನು ಪಟ್ಟಿ ಮಾಡಿ
33. ಸುರಪುರ ದಂಗೆಯ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

**V. ಪ್ರತಿಯೊಂದು ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ: 4X4=16**

34. ಬ್ರಿಟಿಷರ ಶಿಕ್ಷಣ ನೀತಿಯು ಭಾರತೀಯರಲ್ಲಿ ಪ್ರಗತಿಪರ ಆಲೋಚನೆಗಳ ಗೊಸ ತಲೆಮಾರನ್ನು ಸೃಷ್ಟಿಸಿತು. ಈ ಹೇಳಿಕೆಯನ್ನು ಸಮರ್ಥಿಸಿ

ಅಥವಾ

1857ರ ದಂಗೆಯಲ್ಲಿ ಭಾರತೀಯ ಸೈನಿಕರು ಜಯಗಳಿಸಲು ವಿಫಲರಾದರು ವಿಶ್ಲೇಷಿಸಿ

35. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್ ಚಂದ್ರ ಬೋಸ್ ರವರು ಪಾತ್ರವನ್ನು ವಿವರಿಸಿ.
36. ಲೂಥರ್ ಗೂಲಿಕ್ ಪ್ರಕಾರ ಸಾರ್ವಜನಿಕ ಆಡಳಿತದಲ್ಲಿ ಪೋಸ್ಡ್ ಕಾರ್ಬ್(POSDCORB) ಕುರಿತು ವಿವರಿಸಿ.
37. ಭತ್ತದ ಸಾಗುವಳಿಯು ಗೋಧಿಯ ಸಾಗುವಳಿಗಿಂತ ಭಿನ್ನವಾಗಿದೆ. ಹೇಗೆ?

**VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ. 1+4=5**

1) ಭಾಕ್ರಾ ನಂಗಲ್ 2) ಸೂರತ್ 3) ದಿಗ್ಬಾಯ್ 4) ವಿಶಾಖಪಟ್ಟಣ

5) ಬೆಂಗಳೂರು 6) ಮೌಸೀನ್‌ರಾಮ್ 7) ನವಶೇವಾ

# ಮಾದರಿ ಪ್ರಶ್ನೆ ಪತ್ರಿಕೆ –3

**I. ಈ ಪ್ರತಿಯೊಂದು ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** **8x1=8**

1. ಬಂಗಾಳದ ದ್ವಿ ಪ್ರಭುತ್ವ ಪದ್ಧತಿಜಾರಿಗೆ ತಂದವರು
   ಎ) ಮನ್ರೋ ಬಿ) ರಾಬರ್ಟ್ ಕ್ಲೈವ್ ಸಿ) ಸರ್ ಐರ್‌ಕ್ಯೂಟ್ ಡಿ) ಥಾಮಸ್ ಮನ್ರೋ

2. **"ವೇದಗಳಿಗೆ ಹಿಂತಿರುಗಿ"**ಎಂದು ಸಮಾಜಕ್ಕೆ ಕರೆಕೊಟ್ಟವರು
   ಎ) ರಾಜಾರಾಮ್ ಮೋಹನರಾಯ್ ಬಿ) ಸ್ವಾಮಿ ವಿವೇಕಾನಂದ
   ಸಿ) ದಯಾನಂದ ಸರಸ್ವತಿ ಡಿ) ಮಹಾತ್ಮ ಜ್ಯೋತಿ ಬಾಪೂಲೆ
3. ಸಾರ್ವಜನಿಕ ಆಡಳಿತದ ಪಿತಾಮಹ
   ಎ) ಲೂಥರ್ ಗೂಲಿಕೆ ಬಿ) ವುಡ್ರೋವಿಲ್ಸನ್ ಸಿ) ಮಹಾತ್ಮ ಗಾಂಧೀ ಡಿ) ಅಬ್ರಾಹಂ ಲಿಂಕನ್
4. "ಮಾನವ ಕುಲ ತಾನೊಂದೆ ವಲಂ" ಎಂದು ಹೇಳಿದವರು
   ಎ) ಡಾ. ಬಿ.ಆರ್.ಅಂಬ್ಕೇಡಕರ್ 2) ಪಂಪ ಸಿ) ಗಾಂಧೀಜಿ ಡಿ) ರನ್ನ
5. ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ಬಂದ
   ಎ) 1961 ಬಿ) 1962 ಸಿ) 1998 4) 1988
6. ಭಾರತದಲ್ಲಿ ಅತೀ ಹೆಚ್ಚು ಮಳೆ ಪಡೆಯುವ ಸ್ಥಳ ಪಡೆಯುವ ಸ್ಥಳ
   ಎ) ಮಾಸೀಮ್ ರಾಮ್ ಬಿ) ಗಂಗಾನಗರ ಸಿ) ಚೀರಾಪುಂಜಿ ಡಿ) ಆಗುಂಬೆ
7. ನೀತಿ ಆಯೋಗದ ಅಧ್ಯಕ್ಷರು
   ಎ) ರಾಷ್ಟ್ರಪತಿಗಳು ಬಿ) ಉಪರಾಷ್ಟ್ರಪತಿಗಳು ಸಿ) ಪ್ರಧಾನ ಮಂತ್ರಿಗಳು ಡಿ) ರಾಜ್ಯಪಾಲರು
8. ವಿಶ್ವಗ್ರಾಹಕರ ದಿನವನ್ನು ಈ ದಿನದಂದು ಆಚರಿಸುತ್ತೇವೆ
   ಎ) ಮಾರ್ಚ್– 15 ಬಿ) ಮಾರ್ಚ್– 20 ಸಿ)ಫೆಬ್ರವರಿ– 15 ಡಿ) ಫೆಬ್ರವರಿ 20

**ಈ ಕೆಳಗೆ ನೀಡಿರುವ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ:** **8X1=8**

9. 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತಂದವರು ಯಾರು ?
10. ಎರಡನೇ ಆಂಗ್ಲೋ ಮೈಸೂರು ಯುದ್ಧದ ನಂತರ ಯಾವ ಒಪ್ಪಂದ ಜಾರಿಗೆ ಬಂದಿತು?
11. ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು?
12. ವಿದೇಶಾಂಗ ನೀತಿ ಎಂದರೇನು ?
13. 'ಜನ ಮಂದೆ'ಯನ್ನು ವ್ಯಾಖ್ಯಾನಿಸಿ.
14. ವಿಶ್ವ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ ?
15. ಲಗೋನ್‌ಗಳು ಎಂದರೇನು ?
16. ಭಾರತದ ಯೋಜನಾ ಆಯೋಗದ ಪಿತಾಮಹ ಯಾರು ?

**111. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2–3 ವಾಕ್ಯಗಳಲಿ ಉತ್ತರಿಸಿ**

17. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಬ್ರಿಟೀಷ್‌ರು ತಮ್ಮ ವಶಕ್ಕೆ ಪಡೆದ ರಾಜ್ಯಗಳು ಯಾವುವು?
18. ಸ್ವಾಮಿ ವಿವೇಕಾನಂದರು ಸಮಾಜಕ್ಕೆ ನೀಡಿದ ಕೊಡುಗೆಗಳು ಯಾವುವು?

    ಅಥವಾ

    ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳೇನು?
19. ಎರಡನೇ ಮಹಾಯುದ್ಧದ ಪರಿಣಾಮಗಳೇನು ?

    ಅಥವಾ

    ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳು ಯಾವುವು?
20. ಕೋಮವಾದವನ್ನು ನಿಯಂತ್ರಿಸುವ ಕ್ರಮಗಳನ್ನು ಬರೆಯಿರಿ.
21. ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳನ್ನು ತಿಳಿಸಿ.
22. ಸಾಮಾಜಿಕ ಪರಿಸರ ಚಳುವಳಿಗಳನ್ನು ಹೆಸರಿಸಿ.

23. ಕಪ್ಪು ಮಣ್ಣಿನಿಂದ ಆಗುವ ಅನುಕೂಲವನ್ನು ಬರೆಯಿರಿ.
24. ಕರ್ನಾಟಕದಲ್ಲಿ ಕಂಡು ಬರುವ ಪ್ರಮುಖ ಜಲ ವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಪಟ್ಟಿ ಮಾಡಿ.

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 6–8 ವಾಕ್ಯಗಳಲ್ಲಿ ಉತ್ತರಿಸಿ: 9 x3= 27**

25. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

ಅಥವಾ

ಉದ್ಯಮ ಶೀಲತೆಯ ಗುಣ ಲಕ್ಷಣಗಳು ಯಾವುವು?

26. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ಯ ಸಂಸ್ಥೆಗಳ ಪಾತ್ರವನ್ನು ತಿಳಿಸಿ.

**ಅಥವಾ**

ಪೋಸ್‌ಕಾರ್ಬ್ ದೃಷ್ಟಿ ಕೋನವನ್ನು ಗುರುತಿಸಿ.

27. ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿಶ್ಲೇಷಿಸಿ.

**ಅಥವಾ**

ಅಸ್ಪೃಶ್ಯತಾ ನಿವಾರಣೆಗೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ವಿವರಿಸಿ

28. ಬಾಲ ಕಾರ್ಮಿಕ ಸಮಸ್ಯೆಯ ಪರಿಣಾಮಗಳೇನು?
29. ಪ್ಲಾಸಿ ಕದನ ಮತ್ತು ಬಕ್ಸಾರ್ ಕದನದ ನಡುವಿನ ವ್ಯತ್ಯಾಸಗಳನ್ನು ಚರ್ಚಿಸಿ.

**ಅಥವಾ**

ಮೈಸೂರಿನ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕೊಡುಗೆಗಳನ್ನು ನಿಮ್ಮ ಹೇಳಿಕೆಯಲ್ಲಿ ಸಮರ್ಥಿಸಿ

30. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ಹೆಸರಿಸಿ.
31. ಭಾರತದಲ್ಲಿನ ಪಶ್ಚಿಮ ಹಾಗೂ ಪೂರ್ವ ಬಂದರುಗಳನ್ನು ಪಟ್ಟಿ ಮಾಡಿ
32. ಭೂಕಂಪದ ಪರಿಣಾಮ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ
33. 'ಅಂಚೆ ಕಛೇರಿಗಳು ಸಾರ್ವಜನಿಕರಿಗೆ ಹಲವಾರು ಸೇವೆಗಳನ್ನು ಸಲ್ಲಿಸುತ್ತವೆ' ಹೇಗೆ?

**V. ಪ್ರತಿಯೊಂದು ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ: 4X4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯವರ ಪಾತ್ರವನ್ನು ವಿವರಿಸಿ

**ಅಥವಾ**

ಬ್ರಿಟಿಷ್ ಶಿಕ್ಷಣವು ಭಾರತದಲ್ಲಿ ಪ್ರಗತಿ ಪರ ಧೋರಣೆಗಳನ್ನು, ಹೊಸ ತಲೆಮಾರುಗಳನ್ನು ಸೃಷ್ಟಿಸಿತು ಸಮರ್ಥಿಸಿ

35. ವಿಶ್ವ ಸಂಸ್ಥೆಯ ಸಾಧನೆಗಳನ್ನು ವಿವರಿಸಿ.
36. ಭಾರತದ ವ್ಯವಸಾಯದ ವಿಧಾನಗಳನ್ನು ತಿಳಿಸಿ.
37. 'ಚಂಡಮಾರುತಗಳು ವಿನಾಶಕಾರಕವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.

**VI.38 ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ. 1+4=5**

1) 82.1/2 ಪೂರ್ವರೇಖಾಂಶ 2) ಹಟ್ಟಿ ಚಿನ್ನದ ಗಣಿ
3) ಗಂಗಾನಗರ 4) ಪಂಪಸಾಗರ
5) ನವಮಂಗಳೂರು 6) ಇಂದಿರಾ ಪಾಯಿಂಟ್ 7) ಮನ್ನಾರ್ ಖಾರಿ

# ಮಾದರಿ ಪ್ರಶ್ನೆ ಪತ್ರಿಕೆ –4

**I. ಈ ಪ್ರತಿಯೊಂದು ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** **8x1=8**

1. ಮೂರನೇ ಆಂಗ್ಲೋ ಮೈಸೂರು ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು
   ಎ) ಮದ್ರಾಸ ಒಪ್ಪಂದ ಬಿ) ಮಂಗಳೂರು ಒಪ್ಪಂದ
   ಸಿ) ಸಾಲ್ಬಾಯ್ ಒಪ್ಪಂದ ಡಿ) ಶ್ರೀರಂಗಪಟ್ಟಣ ಒಪ್ಪಂದ

2. ಹಿಟ್ಲರ್‌ನ್ನು ಕೈಗೊಂಡ ಸಾಮೂಹಿಕ ಕಗ್ಗೊಲೆಯನ್ನು ಹೀಗೆಂದು ಕರೆಯುವರು
   ಎ) ರಾಜಾರಾಮ್ ಮೋಹನರಾಯ್ ಬಿ) ಸ್ವಾಮಿ ವಿವೇಕಾನಂದ
   ಸಿ)ದಯಾನಂದ ಸರಸ್ವತಿ ಡಿ) ಮಹಾತ್ಮ ಜ್ಯೋತಿ ಬಾಪೂಲೆ
3. ಭಾರತದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯಲು ಈ ಕಾಯ್ದೆಯನ್ನು ಜಾರಿ ಮಾಡಲಾಗಿದೆ
   ಎ) ವರದಕ್ಷಿಣೆ ಕಾಯ್ದೆ ಬಿ) ಪೋಕ್ಸೋ ಕಾಯ್ದೆ
   ಸಿ)ಬಾಲಕಾರ್ಮಿಕ ನಿಷೇಧ ಕಾಯ್ದೆ ಡಿ) ಶಿಕ್ಷಣ ಹಕ್ಕು ಕಾಯ್ದೆ
4. ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಶ್ರಮಿಸುತ್ತಿರುವ ವಿಶ್ವಸಂಸ್ಥೆಯ ಸಮಿತಿ
   ಎ) ಭದ್ರತಾ ಸಮಿತಿ 2) ಸಾಮಾನ್ಯ ಸಭೆ
   ಸಿ)ಅಂತರಾಷ್ಟ್ರೀಯ ನ್ಯಾಯಾಲಯ ಡಿ) ಸಚಿವಾಲಯ
5. ಬೇಸಿಗೆ ಕಾಲದಲ್ಲಿ ಕೇರಳದಲ್ಲಿ ಬೀಳುವ ಮಳೆಯನ್ನು ಹೀಗೆನ್ನುವರು
   ಎ) ಮಾವಿನ ಹುಯ್ಲು ಬಿ)ಕಾಫೀ ತುಂತುರು ಸಿ)ಕಾಲಬೈಸಾಕಿ 4) ಅಂಧೀಸ್
6. ಬಿಹಾರದ ಕಣ್ಣೀರಿನ ನದಿ
   ಎ) ದಾಮೋದರ ನದಿ ಬಿ)ಮಹಾನದಿ ಸಿ) ಕೋಸಿ ನದಿ ಡಿ) ರಿಹಾಂಢ್
7. ಹಸಿರು ಕ್ರಾಂತಿಯಲ್ಲಿ ವಿಶೇಷ ಸಾಧನೆ ಮಾಡಿ 'ವಿಶ್ವ ಆಹಾರ ಪ್ರಶಸ್ತಿ' ಪಡೆದ ಮೊದಲಿಗರು
   ಎ) ಡಾ. ನಾರ್ಮನ್ ಬೋರ್ಲಾಗ್ ಬಿ) ಡಾ. ಸ್ವಾಮಿನಾಥನ್
   ಸಿ) ಸರ್.ಎಂ. ವಿಶ್ವೇಶ್ವರಯ್ಯ ಡಿ) ವರ್ಗೀಸ್ ಕುರಿಯನ್
8. ರಾಜು ಎಂಬ ವ್ಯಕ್ತಿಯು ಭವಿಷ್ಯದಲ್ಲಿ ಕಾರನ್ನು ಖರೀದಿಸಲು ಬಯಸುತ್ತಾನೆ. ಹಾಗಿದ್ದರೆ ತಾವು ಅವನಿಗೆ ಬ್ಯಾಂಕಿನಲ್ಲಿ ತೆರೆಯಲು ಸೂಚಿಸುವ ಖಾತೆ
   ಎ) ಉಳಿತಾಯ ಖಾತೆ ಬಿ) ನಿಶ್ಚಿತ ಠೇವಣಿ ಖಾತೆ
   ಸಿ) ಆವರ್ತ ಖಾತೆ ಡಿ) ಚಾಲ್ತಿ ಖಾತೆ

**II. ಈ ಕೆಳಗೆ ನೀಡಿರುವ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ:** **8X1=8**

9. ದ್ವಿಮುಖ ಸರ್ಕಾರ ಎಂದರೇನು?
10. ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?
11. ನೆಹರೂರವರನ್ನು ಭಾರತದ ವಿದೇಶಾಂಗ ನೀತಿಯ ಪಿತಾಮಹ ಎನ್ನಲು ಕಾರಣವೇನು?
12. ಡಾ. ಶಿವರಾಮ ಕಾರಂತರು ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯನ್ನು ವಿರೋಧಿಸಿದರು. ಏಕೆ?
13. ವರದಕ್ಷಿಣೆ ನಿಷೇಧ ಕಾಯ್ದೆ ಯಾವಾಗ ಜಾರಿಗೆ ಬಂದಿತು?
14. 20ನೇ ಶತಮಾನದ ಅದ್ಭುತ ಲೋಹ ಯಾವುದು?
15. ಪ್ರಗತಿ ಪರ ತೆರಿಗೆ ನೀತಿ ಎಂದರೇನು?
16. ಉದ್ಯಮಗಾರರು ಜನರ ಜೀವನ ಮಟ್ಟವನ್ನು ಹೇಗೆ ಉತ್ತಮಗೊಳಿಸುತ್ತಾರೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2–3 ವಾಕ್ಯಗಳಲಿ ಉತ್ತರಿಸಿ :** **8X2=16**

17. ಬಕ್ಸಾರ್ ಕದನದ ಪರಿಣಾಮಗಳಾವುವು?
18. ಪ್ರತ್ಯಕ್ಷ ನೇಮಕಾತಿ ಹಾಗೂ ಪರೋಕ್ಷ ನೇಮಕಾತಿಗಿರುವ ವ್ಯತ್ಯಾಸವನ್ನು ಪಟ್ಟಿ ಮಾಡಿರಿ

ಅಥವಾ

ದ್ವಿತೀಯ ಮಹಾಯುದ್ಧದ ನಂತರ ಎದುರಾದ ಜಾಗತಿಕ ಸವಾಲುಗಳೇನು?

19. ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು ಹೇಗೆ?

ಅಥವಾ

ಚಿಪ್ಕೋ ಚಳುವಳಿಯ ಕುರಿತು ಬರೆಯಿರಿ

20. ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ಹೇಗೆ ವಿಲೀನಗೊಳಿಸಲಾಯಿತು. ವಿಶ್ಲೇಷಿಸಿ.
21. 'ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ರಸ್ತೆಗಳು ಪ್ರಮುಖ ಪಾತ್ರ ವಹಿಸುತ್ತವೆ'. ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.
22. "ಚಂಡಮಾರುತಗಳು ಪ್ರಕೃತಿ ಹಾಗೂ ಮಾನವ ಕುಲಕ್ಕೆ ವಿನಾಶಕಾರಿಯಾಗಿದೆ" ವಿವರಿಸಿ.
23. ಎರಡನೇ ಹಸಿರುಕ್ರಾಂತಿಯ ಬಗ್ಗೆ ವಿವರ ನೀಡಿ
24. ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು?

## IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 6-8 ವಾಕ್ಯಗಳಲ್ಲಿ ಉತ್ತರಿಸಿ: 9 x3= 27

25. ಬ್ರಿಟೀಷರು ಜಾರಿಗೆ ತಂದ ಆರ್ಥಿಕ ನೀತಿಗಳಿಂದ ಭಾರತದ ಅರ್ಥವ್ಯವಸ್ಥೆಯ ಮೇಲಾದ ಪರಿಣಾಮಗಳನ್ನು ಬರೆಯಿರಿ

**ಅಥವಾ**

"ಸ್ವಾತಂತ್ರ್ಯೋತ್ತರ ಭಾರತವು ಅನೇಕ ಸವಾಲುಗಳನ್ನು ಎದುರಿಸಿತು". ಸಮರ್ಥಿಸಿ

26. ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿ ಮಾಡಿರಿ
27. ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ತೋಟಗಾರಿಕಾ ಬೇಸಾಯವು ಹೆಚ್ಚು ಪ್ರಾಮುಖ್ಯತೆ ಪಡೆಯಲು ಕಾರಣಗಳೇನು?

**ಅಥವಾ**

ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

28. ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸುತ್ತಿತ್ತು?
29. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ವೈಯುಕ್ತಿಕ ಹಣಕಾಸು ಹಾಗೂ ಸಾರ್ವಜನಿಕ ಹಣಕಾಸುಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

30. "ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು" ವಿಶ್ಲೇಷಿಸಿ.
31. "ನಿರುದ್ಯೋಗವು ದೇಶದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ". ಈ ವಾಕ್ಯವನ್ನು ಸ್ಪಷ್ಟೀಕರಿಸಿ.
32. ಮಣ್ಣಿನ ಸವೆತಕ್ಕೆ ಕಾರಣಗಳೇನು?
33. ಅಂಚೆ ಕಛೇರಿಗಳು ಒದಗಿಸುವ ಸೇವೆಗಳಾವುವು?

**ಅಥವಾ**

"ಉದ್ಯಮಶೀಲತೆಯು ಸಾಹಸದ ಕಾರ್ಯವಾಗಿದೆ" ಸಮರ್ಥಿಸಿ.

## V. ಪ್ರತಿಯೊಂದು ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ: 4X4=16

34. "ಬ್ರಿಟೀಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಅಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು" ವಿಶ್ಲೇಷಿಸಿ

**ಅಥವಾ**

"ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಮೈಸೂರಿನ ನಿರ್ಮಾಪಕರು ಹೇಳಿಕೆಯನ್ನು". ಸಮರ್ಥಿಸಿ.

35. ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳಾವುವು?
36. ಲಿಂಗತ್ವ ಅಲ್ಪಸಂಖ್ಯಾತರ ತಾರತಮ್ಯ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವಿವರಿಸಿ.
37. ಪರಿಸರ ಸಂರಕ್ಷಣೆಯಲ್ಲಿ ಅರಣ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಪುಷ್ಟೀಕರಿಸಿ.

## VI.38 ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ. 1+4=5

1) ಕರ್ಕಾಟಕ ಸಂಕ್ರಾತಿ ವೃತ್ತ 2) ರೋಯ್ಲಿ 3) ಬಸವಸಾಗರ
4) ಕಾಂಡ್ಲಾ 5) ಮುಂಬಯಿ 6) ಕೆ2 7) ನರ್ಮದಾ ನದಿ

# ಮಾದರಿ ಪ್ರಶ್ನೆ ಪತ್ರಿಕೆ –5

**I. ಈ ಪ್ರತಿಯೊಂದು ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** **8x1=8**

1. ಪಂಜಾಬ್‌ನ್ನು ಬ್ರಿಟೀಷ್ ಸಾಮಾಜ್ಯದೊಂದಿಗೆ ವಿಲೀನಗೊಳಿಸಿದ ಗೌರ್ನರ್ ಜನರಲ್
   ಎ) ಲಾರ್ಡ್ ಡಾಲ್ ಹೌಸೀ ಬಿ) ಲಾರ್ಡ್ ವೆಲ್ಲೆಸ್ಲಿ
   ಸಿ) ಲಾರ್ಡ್ ಕಾರ್ನ್‌ವಾಲೀಸ್ ಡಿ) ರಾಬರ್ಟ್ ಕ್ಲೈವ್
2. ಒಂದನೇ ಮಹಾ ಯುದ್ಧವು ಈ ಒಪ್ಪಂದೊಂದಿಗೆ ಕೊನೆಗೊಂಡಿತು
   ಎ) ಪ್ಯಾರೀಸ್ ಒಪ್ಪಂದ ಬಿ) ವರ್ಸೈಲ್ಸ್ ಒಪ್ಪಂದ
   ಸಿ)ಬೆಸ್ಸಿನ್ ಒಪ್ಪಂಧ ಡಿ) ಎಕ್ಸ್ ಲಾ ಚಾಪೆಲ್ ಒಪ್ಪಂದ
3. "ಮೊದಲು ತಾನು ಅಣ್ವಸ್ತ್ರವನ್ನು ಪ್ರಯೋಗಿಸುವುದಿಲ್ಲ" ಎಂಬ ನೀತಿಗೆ ಬದ್ಧವಾಗಿರುವ ದೇಶ
   ಎ) ಉತ್ತರ ಕೊರಿಯಾ ಬಿ)ಭಾರತ ಸಿ)ರಷ್ಯಾ ಡಿ) ಚೀನಾ
4. ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯ ನಾಯಕತ್ವವನ್ನು ವಹಿಸಿದ್ದವರು
   ಎ) ಡಾ. ಶಿವರಾಮ ಕಾರಂತ 2) ಬಾಬಾ ಅಮ್ಟೆ
   ಸಿ)ಸುಂದರಲಾಲ ಬಹುಗುಣ ಡಿ) ಮೇಧಾ ಪಾಟ್ಕರ್
5. ಭಾರತದ ನೀತಿ ಆಯೋಗದ ಮುಖ್ಯಸ್ಥರು ಇವರಾಗಿರುತ್ತಾರೆ
   ಎ) ರಾಷ್ಟ್ರಪತಿಗಳು ಬಿ)ಉಪರಾಷ್ಟ್ರಪತಿಗಳು ಸಿ)ಪ್ರಧಾನ ಮಂತ್ರಿಗಳು ಡಿ) ರಾಜ್ಯಪಾಲರು
6. ಬೇಸಿಗೆಯಲ್ಲಿ ಉತ್ತರ ಭಾರತವು ದಕ್ಷಿಣ ಭಾರತಕ್ಕಿಂತ ಹೆಚ್ಚು ಉಷ್ಣಾಂಶದಿಂದ ಕೂಡಿರಲು ಕಾರಣ
   ಎ) ಮಾರುತಗಳ ದಿಕ್ಕು ಬಿ)ಸಮುದ್ರ ಮಟ್ಟದಿಂದ ದೂರ ಸಿ) ಒತ್ತಡ ಡಿ) ಅಕ್ಷಾಂಶ
7. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಥಾಪನೆಯಾದ ವರ್ಷ
   ಎ) 1991 ಬಿ)1960 ಸಿ)1988 ಡಿ) 1953
8. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ
   ಎ) ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು
   ಬಿ) ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ಒದಗಿಸಲು
   ಸಿ) ಉದ್ಯಮಿಗಳಿಗೆ ಬೆಂಬಲಿಸಲು
   ಡಿ) ಬೃಹತ್ ಕೈಗಾರಿಕೆಗಳಿಗೆ ಉತ್ತೇಜನ ನೀಡಲು

**II. ಈ ಕೆಳಗೆ ನೀಡಿರುವ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ:** **8X1=8**

9. ಕಾನ್‌ಸ್ಟಾಂಟಿನೋಪಲ್ ನಗರವನ್ನು "ಯೂರೋಪಿನ ವ್ಯಾಪಾರದ ಹೆಬ್ಬಾಗಿಲು" ಎಂದು ಪರಿಗಣಿಸಲ್ಪಟ್ಟಿತ್ತು. ಏಕೆ?
10. ತೀನ್ ಮೂರ್ತಿ ಚೌಕ ಎಲ್ಲಿದೆ?
11. ವಿಶ್ವ ಸಂಸ್ಥೆಯ ಯಾವ ಅಂಗ ಸಂಸ್ಥೆಯು ಜಾಗತಿಕ ಸಂಸತ್ತು ಎಂದು ಪ್ರಸಿದ್ಧಿಯಾಗಿದೆ?
12. ಮಾನವ ಕುಲ ತಾನೊಂದೇ ವಲಂ ಈ ಹೇಳಿಕೆಯನ್ನು ನೀಡಿದವರು ಯಾರು?
13. ದೊಂಬಿ ಎಂದರೇನು?
14. ಭಾರತದ ಅತ್ಯಂತ ಉದ್ದವಾದ ಅಣೆಕಟ್ಟು ಯಾವುದು?
15. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?
16. ಭಾರತೀಯ ನವೋದಯದ ಜನಕ ಯಾರು ?

**111. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 2–3 ವಾಕ್ಯಗಳಲಿ ಉತ್ತರಿಸಿ**

17. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳು ಯಾವುವು?
18. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳೇನು?

ಅಥವಾ

ಭದ್ರತಾ ಮಂಡಳಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳೂ ಯಾವುವು? ?

19. ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು. ಹೇಗೆ?

ಅಥವಾ

ಕೂಲಿ ಸಹಿತ ಹಾಗೂ ಕೂಲಿರಹಿತ ದುಡಿಮೆಗಳ ವ್ಯತ್ಯಾಸ ತಿಳಿಸಿ.

20. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?
21. ಮಣ್ಣಿನ ಸಂರಕ್ಷಣೆಯು ಪ್ರಸ್ತುತ ಅತಿ ಅಗತ್ಯವಾಗಿದೆ ಸ್ಪಷ್ಟೀಕರಿಸಿ.
22. ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಯಾವುವು?
23. ಕೊರತೆಯ ಹಣಕಾಸಿನ ನಾಲ್ಕು ವಿಧಗಳನ್ನು ತಿಳಿಸಿ.
24. ಭಾರತದ ಗ್ರಾಹಕ ಸಂರಕ್ಷಣಾ ಕಾಯ್ದೆಯು ನೀಡಿರುವ ನಾಲ್ಕು ಹಕ್ಕುಗಳನ್ನು ಹೆಸರಿಸಿ.

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ 6–8 ವಾಕ್ಯಗಳಲ್ಲಿ ಉತ್ತರಿಸಿ: 9 x3= 27**

25. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ

ಅಥವಾ

ಬ್ರಿಟೀಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ.

26. ಭೂಕಂಪದ ಪರಿಣಾಮಗಳು ಯಾವುವು?

**ಅಥವಾ**

ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

27. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಮುಖ ಪಾತ್ರ ವಹಿಸುತ್ತವೆ ಸಮರ್ಥಿಸಿ.

**ಅಥವಾ**

ಅಸ್ಪಶ್ಯತಾ ನಿವಾರಣೆಗೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ವಿವರಿಸಿ?

28. ಸತ್ಯ ಶೋಧಕ ಸಮಾಜ ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.
29. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.
30. ಪ್ರತ್ಯಕ್ಷ ನೇಮಕಾತಿ ಹಾಗೂ ಪರೋಕ್ಷ ನೇಮಕಾತಿಗಳಿಗಿರುವ ವ್ಯತ್ಯಾಸ ಬರೆಯಿರಿ.
31. ಭಾರತದಲ್ಲಿ ಕಂಡು ಬರುವ ಅರಣ್ಯಗಳ ವಿಧಗಳು ಯಾವುವು?
32. ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು ತಿಳಿಸಿ.
33. ಬ್ಯಾಂಕ್ ಸಲ್ಲಿಸುವ ಸೇವೆಗಳನ್ನು ಬರೆಯಿರಿ.

**V. ಪ್ರತಿಯೊಂದು ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ: 4X4=16**

34. ಸ್ವಾತಂತ್ರ್ಯ ಚಳುವಳಿಯಲ್ಲಿ ಬುಡಕಟ್ಟು ಬಂಡಾಯಗಳನ್ನು ವಿವರಿಸಿ.

**ಅಥವಾ**

ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ್ ತಿಲಕ್‌ರ ಪಾತ್ರವನ್ನು ಬರೆಯಿರಿ

35. ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ತಿಳಿಸಿ.
36. ಲಿಂಗತ್ವ ಅಲ್ಪಸಂಖ್ಯಾತರ ತಾರತಮ್ಮವನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ
37. ಇತ್ತೀಚಿನ ದಿನಗಳಲ್ಲಿ ತೋಟಗಾರಿಕಾ ಬೇಸಾಯವು ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

**VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ. 1+4=5**

1) 82.1/2 ಪೂರ್ವರೇಖಾಂಶ 2) ತುಂಗಾಭದ್ರಾ ಯೋಜನೆ
3) ನರೋರ 4) ನೇತಾಜಿ ಸುಭಾಷ್‌ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ
5) ಕೈಗಾ 6) ಪ್ಯಾರದೀಪ್ 7) ಮಲಬಾರ್ ತೀರ